SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 119] ಶುಕ್ರವಾರ 4—1—46 [ಬಿಡಿ ಪ್ರತಿ 3 ಪೈ

ಅಖಿಲ ಭಾರತ ಆಯುರ್ವೇದ ಮಹಾ ಸಮ್ಮೇಳನ

"ಆಯುರ್ವೇದ ಪ್ರಚಾರ ದೇಶದ ಎಲ್ಲೆಡೆಯಲ್ಲೂ ನಡೆಯಬೇಕು"

ಉಡುಪಿಯ ಮಣಿಪಳದಲ್ಲಿ ನಡೆದ 34 ನೆ ಅಖಿಲ ಭಾರತ ಆಯುರ್ವೇದ ಮಹಾ ಸಮ್ಮೇಳನದಲ್ಲಿ ವಹಿಸಿದ ನಿರ್ಣಯಗಳಾದವು : 1 ಭಾರತದ ನಾನಾ ವಿಶ್ವವಿದ್ಯಾನಿಲಯಗಳ ಅಧಿಕಾರಿಗಳಿಂದ ಆಯುರ್ವೇದ ಪ್ರಚಾರವನ್ನೇರ್ಪಡಿಸುವುದು 2 ಭಾರತ ರಾಷ್ಟ್ರೀಯ ಸೇನೆಗಳನ್ನು ವಶ ಮಾಡಿಕೊಂಡ ಅಧಿಕಾರಿಗಳನ್ನು ಬಿಡುಗಡೆ ಮಾಡಲು ಒತ್ತಾಯಪಡಿಸುವುದು 3 ಅಖಿಲ ಭಾರತ ಆಯುರ್ವೇದ ಪ್ರಚಾರ ನಿಘಂಟನ್ನು ಪ್ರಕಟಿಸುವುದು 4 ವಿದೇಶಗಳಿಗೆ ಆಯುರ್ವೇದ ವೈದ್ಯರನ್ನು ಕಳುಹಿಸಿ ಪರಿಹಾರ ಒದಗಿಸುವುದು 5 ಚಹಾ ತೋಟಗಳಲ್ಲಿ ಆಯುರ್ವೇದಾಭಿಮಾನಿಗಳಿಗೆ ಸವಲತ್ತು ಮಾಡುವುದು 6 ಆಯುರ್ವೇದ ಸಮ್ಮೇಳನ ಪತ್ರಿಕೆಗಳನ್ನು ಇಂಗ್ಲೀಷ್ ಮತ್ತು ಸಂಸ್ಕೃತದಲ್ಲಿ ಪ್ರಕಟಿಸುವುದು 7 ಪಠ್ಯ ಪುಸ್ತಕಗಳಲ್ಲಿ ಆಯುರ್ವೇದ ವಿಚಾರವನ್ನು ಸೇರಿಸುವುದು 8 ಆಯುರ್ವೇದ ಕಾಲೇಜಿನ ಕಾರ್ಯ ಕಲಾಪಗಳನ್ನು ಸಂಸ್ಕೃತದಲ್ಲಿ ನಡೆಸುವುದು 9 ಉಡುಪಿಯಲ್ಲಿ ಆಯುರ್ವೇದ ಚಿಕಿತ್ಸಾಲಯವನ್ನು ತೆರೆಯುವುದು 10 ಭಾರತದಲ್ಲಿ ಬೇಗ ರಾಷ್ಟ್ರೀಯ ಸರ್ಕಾರ ಸ್ಥಾಪಿಸಲು ಒತ್ತಾಯಿಸಿಸುವುದು ಇತ್ಯಾದಿ

ಈ ಸಮ್ಮೇಳನಕ್ಕೆ ಮೈಸೂರು ಸ್ವಾಮ್ಯದಿಂದ ಶೃಂಗೇರಿ, ಪರಕಾಲ, ಚಿತ್ರದುರ್ಗ ಸ್ವಾಮಿಗಳವರು ಶ್ರೀಗಳಾದ ಎಂ. ಎ. ಗೋಪಾಲಸ್ವಾಮಯ್ಯಂಗಾರ್ ರವರೂ ಶಿಂಗ್ರೈಂಗಾರ್ ರವರೂ ಸ್ವಾಮಿಜಿಯವರೂ ಬಿ. ಜಿ. ಖೇರ್ ರವರೂ ರಾಜಾಜಿಯವರೂ ಕಾಶ್ಮೀರ ಉದಯಪುರ ರಾಜರುಗಳೂ ಮತ್ತು ಇತರ 250 ಮಂದಿ ಸಂದೇಶ ಕಳುಹಿಸಿದ್ದರು.

ಮೈಸೂರು ಸಿಟಿ ಮುನಿಸಿಪಾಲಿಟಿ

ಮೈಸೂರು ತಾ || 27—12—45

ಹರಾಜು ನೋಟೀಸು

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಕೃಷ್ಣರಾಜವನಂನಲ್ಲಿ ಮೈಸೂರು ಸಿಟಿ ಮುನಿಸಿಪಾಲಿಟಿಯವರು ಕಟ್ಟಿಸಿರುವ 'ಮಾಡಲ್ ಹೌಸಸ್' 8 ಮನೆಗಳು ಪಬ್ಲಿಕ್ಕಾಗಿ **6—1—46** ನೇ ತಾರೀಖು ದಿವಿ 10 ಘಂಟೆಗೆ ಸದರಿ ಮನೆಗಳ 'ಬಳಿ ಹರಾಜು ಮಾಡಲ್ಪಡುತ್ತವೆ. ಇಷ್ಟವುಳ್ಳವರು ಖುದ್ದು ಹಾಜರಾಗಿ ಹರಾಜಿನಲ್ಲಿ ಸವಾಲ್ ಮಾಡಿ ಸದರೀ ಮನೆಗಳನ್ನು ಪಡೆಯಬಹುದು. ಹೆಚ್ಚಿಗೆ ವಿಚಾರಗಳನ್ನು ಮುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

(ಸಹಿ) ಆರ್. ಎಲ್. ರಾಜು

ಮುನಿಸಿಪಲ್ ಎಂಜಿನಿಯರ್

ಬ್ರಿಟಿಷ್ ಪಾರ್ಲಿಮೆಂಟ್ ನಿಯೋಗವು ಇದೇ 5 ರಲ್ಲಿ ಭಾರತಕ್ಕೆ ಬರುವದು. ಒಂದು ತಿಂಗಳ ಕಾಲ ಭಾರತಾದ್ಯಂತ ಸಂಚರಿಸುವದು. ಮೈಸೂರಿಗೂ ಸಹ ಭೇಟಿ ಕೊಡುವದು.

ಂ ಂ

ಕಾಂಗ್ರೆಸ್ ವ್ಯಕ್ತ ಆಜಾದ್ ಹಿಂ ಫೌಜಿನ ಧ್ಯೇಯಗಳು ಒಂದೇ ಎಂಬುದಾಗಿ ಶ್ರೀ ಶರತ್‌ಬೋಸರು ಡೆಲ್ಲಿಯಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು.

ಂ ಂ

ಇಂಡಿಯನ್ ಸೈನ್ಸ್ ಕಾಂಗ್ರೆಸಿನ 9 ನೇ ಅಧಿವೇಶನ ಮುಂದಿನ ವರ್ಷ ಪಾಟ್ನಾದಲ್ಲಿ ಪಂ || ನೆಹರೂರವರ ಅಧ್ಯಕ್ಷತೆಯಲ್ಲಿ ಸೇರುವುದು.

ಶ್ರೀ ಬೋಸ್ ಸತ್ತಿಲ್ಲ !

ಡಾ || ಪಟ್ಟಾಭಿ ಸೀತಾರಾಮಯ್ಯ

ಬೆಲ್ಲುಸು ಸಾಂಬಮೂರ್ತಿ ಕೊಂಡಾ ವೆಂಕಟಪ್ಪಯ್ಯನವರುಗಳು ಕಾಂಗ್ರೆಸ್ ಪಾರ್ಲಿಮೆಂಟರಿಯಿಂದ ಬೇರ್ಪಟ್ಟಿದ್ದಾರೆ. ಪಟ್ಟಾಭಿಯವರು ಚುನಾವಣೆಗೆ ನಿಲ್ಲುವುದಿಲ್ಲ

ಶ್ರೀ ಸುಭಾಷರು ಬದುಕಿರುವರು. ಆದರೆ ಎಲ್ಲೋ ಅವಿತಿರುವರು. ಅವರ ಧೈರ್ಯವನ್ನು ನಾನು ಕೊಂಡಾಡುತ್ತೇನೆ. ಆದರೆ ಅವರ ಅನ ಸಂಜೆಯಲ್ಲಿ ನುಜಿಕೆಯಿಲ್ಲ ಭಾರತವು ಶಕ್ತಿಯಿಂದ ಸ್ವತಂತ್ರವಾಗಲಾರದು — ಎಂದು ಕಾಂಟಾಯಿಯ ಕಾರ್ಮಿಕ ಸಭೆಯೊಲ್ಲಿ ಗಾಂಧೀಜೀ ತಿಳಿಸಿದರು.

ಷಾ ನವಾಜ್ ಸೆಗಾಲ್ ಧಿಲ್ಲಾನ್

ಮೇಲ್ಕಂಡ ಮೂರು ಮಂದಿ ಆಜಾದ್ ಹಿಂದ್ ಜನರ ಮೇಲೆ ಕೋರ್ಟ್ ಮಾರ್ಷಲ್‌ರವರು ವಿಧಿಸಿದ ಜೀವಾವಧಿ ಸಜೆಯನ್ನು ಕಮ್ಯಾಂಡರ್ ಇನ್ ಚೀಫರು ರದ್ದು ಮಾಡಿದ್ದಾರೆ. ಆದರೆ ಇವರ ಮೇಲಿನ ಕ್ಯಾಷಿಯರಿಂಗ್ ಮತ್ತು ಹಿಂದಿನ ಸಂಬಳ ಆಲೋಯನ್ಸುಗಳನ್ನು ರದ್ದುಮಾಡಿಲ್ಲ.

ಲಂಡನ್, ಜ 2 — ರಷ್ಯಾ ಸುಪ್ರೀಂ ಸೋವಿಯಟ್ ಚುನಾವಣೆಗೆ ಸ್ಟಾಲಿನ್ನರನ್ನು ನಿಲ್ಲಿಸಿದ್ದಾರೆ.

ಚುಂಕಿಂಗ್, ಜ 2 — ಚೀನಾ ಸರ್ಕಾರಿ ಸೈನ್ಯಗಳು ಜಹೋಲಿಗೆ ತಲುಪಿವೆ. ಕಮ್ಯುನಿಸ್ಟರು ಪ್ರತಿಭಟನೆಯನ್ನು ಮಾಡುತ್ತಿದ್ದಾರೆ.

ಮದರಾಸು, ಜ 2 — ರಾಜಮಹೇಂದ್ರಿ ಜೈಲಿನಲ್ಲಿ ಮಿಲಿಟರಿ ಮತ್ತು ರಾಜಬಂದಿಗಳು ಉಪವಾಸ ಪ್ರಾರಂಭಿಸುವರೆಂದು ಹೇಳಲಾಗಿದೆ

ದಕ್ಷಿಣ ಜಪಾನೀ ದ್ವೀಪ ಕಟೂಸಿಯಿಂದ ಹಾಂಕಾಂಗಿಗೆ 16000 ಟನ್ ಕಲ್ಲಿಜ್ಜಲನ್ನು ಕಳುಹಿಸಲಾಗುವುದು.

ಹೆರ್‌ಫರ್ಡ್, ಜ 2 — ಹಿಟ್ಲರಿನ ಮೂರನೆ ಉಯಿಲೊಂದು ಮೇಜರ್ ವಿಲ್‌ಹೆಲ್ಮ್ ಮನೆಯ ತೋಟದಲ್ಲಿ ಸಿಕ್ಕಿರುವುದು. ಇವು ಗಾಜಿನ ಸೀಸೆಯೊಂದರಲ್ಲಿದ್ದು ಹಿಮ್ಲರಿನ ಕುತಂತ್ರದ ಭಳುಕ್ಕಾಗಿ ಬರೆಯಲಾಗಿದೆಯೆಂದು ಬರದಿರುವುದಂತೆ.

ಸೈಗಾಂ, ಜ 1 — ಜಪಾನೀಯರ ಶಸ್ತ್ರ ಸನ್ಯಾಸವನ್ನು ಮುಗಿಸಿ ಇಂಡೋಚೀನಾದಿಂದ ಬ್ರಿಟಿಷ್ ಸೇನೆ ವಾಪಸಾಗಲಿದೆ.

ಕಾಂಟ್ಯಾ ಜ 2— ಗೌರ್ನರ್ ಕಾಸೆಯವರೊಡನೆ ಗಾಂಧೀಜೀ ನಡೆಸಿದ ಮಾತುಕತೆಗಳಲ್ಲಿ ಬಂಗಾಳಾದ ನೀರಾವರಿ ಮತ್ತು ಬಜ್ಜಲು ಕಾಮುಗಾರಿ ವಿಷಯ ಚರ್ಚಿಸಿದರು.

ವಾಷಿಂಗ್ಟನ್ ಡಿ 31— ಅಮೇರಿಕಾವು ಸ್ಪೇನಿಗೆ ಹೊಸ ರಾಯಭಾರಿಯನು ಕಳುಹಿಸುವುದಿಲ್ಲವಂತೆ.

ಟೋಕಿಯೋ ಜ 2— ಜಪಾನ್ ಸರಕಾರವು 4471 ಟನ್ ಬೆಳ್ಳಿಯನ್ನು ಕರಗಿಸಿ ಶುದ್ದಿಗೊಳಿಸಲೂ, ಮತ್ತು ನೈಗಾರಿಕೆ ಆಯುಧ ತಯಾರ್ಮಾಡುವುದಕ್ಕೆ 20 ಕ್ಯಾರೆಲ್ ವಜ್ರ ತೆಗೆದುಕೊಳ್ಳಲೂ ಮೆಕ್ ಆರ್ಥರರು ಅಪ್ಪಣೆಕೊಟ್ಟಿದಾರೆ.

ಲಕ್ನೋ ಜ 2 — ಮೂರು ಮಂದಿ ಐ.ಎನ್.ಎ. ಜನರನ್ನು ಗುಂಡಿಕ್ಕಿ ಸಾಯಿಸಲಾಯಿತೆಂದು ಇಲ್ಲಿಗೆ ಬಂದಿರುವ ಐ.ಎನ್.ಎ ಜನರು ಹೇಳುತ್ತಾರೆ.

ನವದೆಹಲಿ ಜ 2 — ಇಲ್ಲಿ ನಡೆಯುವ ರಾಷ್ಟ್ರೀಯ ಮಹಾಸಭಾ ಅಂಗವಾಗಿ ಹಳ್ಳಿ ಕೈಗಾರಿಕೆ ವಸ್ತು ಪ್ರದರ್ಶನ ನಡೆಸಲಾಗುವುದು.

ಕೊಚ್ಚಿನಲ್ಲಿ ಹೋಟಲುಗಳಲ್ಲಿ ಊಟ ಒಂದಕ್ಕೆ ನಾಲ್ಕಾಣೆಯೆಂಬುದಾಗಿ ತಿಳಿಯಬಂದಿದೆ.

ಕಾನ್ಪುರ ಮೂಯಿರ ವಿ-ಲ್ಲಿನ ಕೆಲಸಗಾರರು ಠಾತ್ಕಾಲಿಕೆಯೊಬ್ಬನಿಗೆ ಕಾಯಿಲೆ ಇದ್ದಾಗ್ಯೂ ರಜಾ ಕೊಡದೆ ಹೊಡೆದು ಸಾವಿಗೆ ಕಾರಣರಾದರೆಂದು ಮೂರು ಸಾವಿರ ಮಂದಿ ಮುಷ್ಕರಿಸಿದುವರು.

ಮೈಸೂರು ಡಿ 3— ಈ ದಿವಸ ಮೈಸೂರು ಪತ್ರಿಕೋದ್ಯೋಗಿ ಸಂಘದವರು ವಿಶೇಷ ಎಟಾಟಿಂಗು ನಡೆಸಿ ಶ್ರೀಮನ್ಮಹಾರಾಜರವರಿಗೆ ಜಿ ಸಿ ಬಿ. ಪ್ರದರ್ಶನ ದೊರೆತಿರುವುದಕ್ಕಾಗಿ ಅಭಿನಂದಿಸಿ ನಿರ್ಣಯ ಮಾಡಿದರು.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಪೌರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪೌಂ ಟಿನ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಗಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Ranjit

ಪೃಥ್ವಿರಾಜ್, ಷಮ್ಮಿ, ಮೋನಿಕಾ, ದೇಶಾಯಿ, ಮುಂತಾದವರು ನಟಿಸಿರುವ

— ಗೌರಿ —

(ಹಿಂದಿ)

27-12-45 ರಿಂದ ಪ್ರತಿದಿನ 3 ಆಟ 3-30, 6-30 ಮತ್ತು 9-45 ಕ್ಕೆ

ಹಸಕ್ ಬೆಟ್ಟದಪುರದ ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

ಸತ್ಯವಾದಿ

ದಿನಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ.

ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ, ಚಾಮರಾಜಪುರಂ, ಮೈಸೂರು

ಅಕ್ಕರ

ಸಾಮಾಜಿಕ

. ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಹೈದರಾಬಾದಿನ ನೈಜಾಮರಿಗೆ ಸೂತನ ವರ್ಷ ಬಿರುದಾವಳಿಗಳಲ್ಲಿ ದೊರೆತಿರುವ ರಾಯಲ್ ವಿಕ್ಟೋರಿಯಾ ಜ್ಯೆಭಾರತೀಯರಿಗೆ ಬಂದಿರುವುದು ಇದೇ ಪ್ರಥಮವೆಂದು ಈಸ್ಟ್ ಇಂಡಿಯಾ ಅಸೋಸಿಯೇಷನ್ ಕಾರ್ಯದರ್ಶಿ ತಿಳಿಸಿದ್ದಾರೆ

ಕ್ಯಾ॥ ಲಕ್ಷ್ಮಿಯ ಅಕೆಯ ತಾಯಿಗೆ ಒರೆದಿರುವ ಕಾಗದದಲ್ಲಿ ತನ್ನನ್ನು ಭಾರತಕ್ಕೆ ತರುವ ವಿಷಯ ಗೊತ್ತಿಲ್ಲವೆಂದು ತಿಳಿಸಿರುವರಂತೆ.

ಕೃಷ್ಣಾ ನದಿಯ ದಡದಲ್ಲಿರುವ ಮೆಹಬೂಬ್ ನಗರ ಡಿಸ್ಟ್ರಿಕ್ಟಿನಲ್ಲಿ ಸಾವಿರ ವರ್ಷದ ಹಿಂದಿನ ದೇವಾಲಯಗಳೂ, ವಿಗ್ರಹಗಳೂ ದೊರೆತಿವೆ.

ಗಾಂಧೀಜೀರವರು ಸ್ಕೌಟ್ ತತ್ವವನ್ನು ಸರಿಯಾಗಿ ಪ್ರತಿಪಾದಿಸುವರೆಂದು ಯೋಟ್‌ಮಲ್‌ನಲ್ಲಿ ನಡೆದ ರ್ಯಾಲಿಯಲ್ಲಿ ಸ್ಕೌಟ್ ಕಮಿಷನರು ತಿಳಿಸಿದರು.

ಲಂಡನ್ನಿನಲ್ಲಿ ಪ್ರಮುಖ ಪಂಚಮರು ಇದೇ ತಿಂಗಳು ಸೇರಿ ಪ್ರಪಂಚದಲ್ಲಿ ಶಾಂತಿ ನೆಲಸಲು ಅಗತ್ಯವಾದ ಅಂತರ್ರಾಷ್ಟ್ರೀಯ ಪೋಲೀಸು ಶಿಬ್ಬಂದಿ ಪ್ರಶ್ನೆ ಬಗ್ಗೆ ಚರ್ಚಿಸುವರೆಂದು ಹೇಳಲಾಗಿದೆ.

ಕಲ್ಕತ್ತಾ ಟ್ರಾಂವೇ ಕಂಪೆನಿಗೂ ನಗರಸಭೆಗೂ ಟ್ರಾಂವೇ ಕಂಪೆನಿಗೂ ತಿಕ್ಕಾಟ ಪ್ರಾರಂಭವಾಗಿರುವುದು. ಶರತ್‌ಬೋಸರು ನಗರಸಭೆ ಪರ, ಯಂಗೀರವರು ಟ್ರಾಂವೇ ಕಂಪೆನಿಯ ಪರ ಪಂಚಾಯಿತರಾಗಿ ನೇಮಿತರಾಗಿರುವರು. ಕಂಪೆನಿಯವರು 85159075 ರೂಪಾಯಿಗಳನ್ನು ಗಳುತ್ತಿರುವರು. ನಗರ ಸಭೆಯವರು 36935200 ರೂಪಾಯಿಗಳಿಗೆ ಪಕ್ಕಬೇಕೆಂದಿರುವರು.

ನಾಜೀ ರೇಡಿಯೋ ಪ್ರಚಾರಕನಾಗಿದ್ದ ವಿಲಿಯಂ ಜಾಯಿಸ್ (ಲಾರ್ಡ್ ಹಾಹಾ) ರನ್ನು ನಿನ್ನೆ ಬೆಳಿಗ್ಗೆ ಶೂಲ ಶೂಲಕ್ಕೇರಿಸಲಾಯಿತು.

AT Opera — 2 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ

ಪಾತ್ರವಹಿಸಿರುವ

ಅಶೋಕ ಕುಮಾರ (ತಮಿಳು)

L. N. Press

Sriramp et MYSORE

For Good Printing

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಕಿಸು ಧಾ

ಬೆಲೆ ಡಬ್ಬಿಗೆ ೯ ಕ್ಕೆ ಒಂದು ರೂಪಾಯಿ — ವಿಳಾಸ— ಶಕ್ತಿ ಸುಧಾ, ೧೦೬೭ ಚಾಮರಾಜಪುರಂ, ಮೈಸೂರು